ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ಫೆಬ್ರವರಿ 11, 2016

## ಲಾನ್ಸ್ ನಾಯಕ್ ಹನುಮಂತಪ್ಪ ಸಾವು : ದೆಹಲಿಯಲ್ಲಿ ಬೀಡು ಬಿಟ್ಟಿರುವ ಕುಟುಂಬವನ್ನು ಕರೆತರಲು ವಿಶೇಷ ವಿಮಾನ ವ್ಯವಸ್ಥೆ

ಬೆಂಗಳೂರು, ಫೆಬ್ರವರಿ 11 :

ಭಾರತ ಹಾಗೂ ಪಾಕಿಸ್ತಾನ ಗಡಿಯ ಸಿಯಾಚಿನ್ ಪ್ರದೇಶದಲ್ಲಿ ಫೆಬ್ರವರಿ 3 ರಂದು ನಡೆದ ಹಿಮಪಾತದಲ್ಲಿ ಬದುಕುಳಿದಿದ್ದ ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಲಾನ್ಸ್ ನಾಯಕ್ ಶ್ರೀ ಹನುಮಂತಪ್ಪ ಕೊಪ್ಪದ್ ಅವರು ದೆಹಲಿಯ ಆರ್ ಆರ್ ಆಸ್ಪತ್ರೆಯಲ್ಲಿ ಇಲ್ಲಿ ಇಂದು ಕೊನೆಯುಸಿರೆಳೆದರು ಎಂಬ ಸುದ್ದಿ ತಿಳಿದೊಡನೆಯೇ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ತೀವ್ರ ದುಃಖವನ್ನು ವ್ಯಕ್ತಪಡಿಸಿದರು.

ಲಾನ್ಸ್ ನಾಯಕ್ ಶ್ರೀ ಹನುಮಂತಪ್ಪ ಕೊಪ್ಪದ್ ಅವರು ಬದುಕುಳಿಯುವ ವಿಶ್ವಾಸ ತಮ್ಮಲ್ಲಿತ್ತು. ಸಿಯಾಚಿನ್ ಹಿಮ ಕುಸಿತದಲ್ಲಿ ಹುತಾತ್ಮರಾದ ವೀರ ಯೋಧರಾದ ಮೈಸೂರು ಜಿಲ್ಲೆಯ ಮಹೇಶ್ ಹಾಗೂ ಹಾಸನ ಜಿಲ್ಲೆಯ ನಾಗೇಶ್ ಜೊತೆಗೆ ಲಾನ್ಸ್ ನಾಯಕ್ ಶ್ರೀ ಹನುಮಂತಪ್ಪ ಕೊಪ್ಪದ್ ಅವರು ಬಹು ಅಂಗಾಂಗ ವೈಫಲ್ಯದ ಹಿನ್ನೆಲೆಯಲ್ಲಿ ವಿಧಿವಶರಾದದ್ದು ತಮಗೆ ಅತ್ಯಂತ ನೋವನ್ನು ಉಂಟುಮಾಡಿದೆ ಎಂದು ಮುಖ್ಯಮಂತ್ರಿ ಹೇಳಿದರು.

ಹೆಬ್ಬಾಳ ವಿಧಾನ ಸಭಾ ಕ್ಷೇತ್ರದ ಉಪ ಚುನಾವಣೆಯ ಪ್ರಚಾರದಲ್ಲಿ ಪಾಲ್ಗೊಂಡಿದ್ದ ಶ್ರೀ ಸಿದ್ದರಾಮಯ್ಯ ಅವರು ತಮ್ಮ ಪ್ರಚಾರ ಭಾಷಣವನ್ನು ಮೊಟಕುಗೊಳಿಸಿ ಲಾನ್ಸ್ ನಾಯಕ್ ಶ್ರೀ ಹನುಮಂತಪ್ಪ ಅವರ ಗೌರವಾರ್ಥ ಒಂದು ನಿಮಿಷ ಮೌನ ಆಚರಿಸಿ, ವೀರ ಯೋಧನ ಗುಣಗಾನ ಮಾಡಿದರು.

ನವದೆಹಲಿಯ ಕರ್ನಾಟಕ ಭವನದ ನಿವಾಸಿ ಆಯುಕ್ತ ಶ್ರೀ ಅತುಲ್ ಕುಮಾರ್ ತಿವಾರಿ ಅವರಿಗೆ ದೂರವಾಣಿ ಕರೆ ಮಾಡಿ ದೆಹಲಿಯಲ್ಲಿ ಬೀಡು ಬಿಟ್ಟಿರುವ ಲಾನ್ಸ್ ನಾಯಕ್ ಶ್ರೀ ಹನುಮಂತಪ್ಪ ಕೊಪ್ಪದ್ ಅವರ ಕುಟುಂಬವನ್ನು ರಾಜ್ಯಕ್ಕೆ ಕರೆ ತರಲು ವಿಶೇಷ ವಿಮಾನದ ವ್ಯವಸ್ಥೆ ಮಾಡುವಂತೆ ಮುಖ್ಯಮಂತ್ರಿ ನಿರ್ದೇಶನ ನೀಡಿದರು.

**********

ಡಿ ಪಿ ಎಂ